ಕರ್ನಾಟಕ ಸರ್ಕಾರ ಕಾರ್ಮಿಕ ಇಲಾಖೆ

ಸಂ:ಜಂಕಾಆ(ಕವೇ)ಇತರೆ/2014-15

ಕಾರ್ಮಿಕ ಆಯುಕ್ತರವರ ಕಛೇರಿ,
ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ,
ಬೆಂಗಳೂರು-29, ದಿನಾಂಕ: 23-12-2014

ನಿರ್ದೇಶಕರು,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,
ಬೆಂಗಳೂರು.

-ಇವರಿಗೆ,

ಮಾನ್ಯರೇ,

ವಿಷಯ: ಗ್ರಾಮೀಣ ಪುನರ್ವಸತಿ ಯೋಜನೆ ಅಡಿ 'ಕರ್ತವ್ಯ' ನಿರ್ವಹಿಸುತ್ತಿರುವ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರಿಗೆ ಕಾರ್ಮಿಕ ಕಾಯ್ದೆಗಳ ಸೌಲಭ್ಯಗಳನ್ನು ಒದಗಿಸುವ ಬಗ್ಗೆ.

ಉಲ್ಲೇಖ: ತಮ್ಮ ಕಛೇರಿ ಪತ್ರ ಸಂ: ಇಸಿ:10 ಗ್ರಾ.ಪು.ಯೋ:2012-13/4117ರ ದಿನಾಂಕ: 24-11-2014.

** ** **

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಾವು ಉಲ್ಲೇಖ ಪತ್ರದೊಂದಿಗೆ ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಗ್ರಾಮೀಣ ಪುನರ್ವಸತಿ ಹಾಗೂ ವಿವಿದೊದ್ದೇಶ ಕಾರ್ಯಕರ್ತರುಗಳು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಅಂಗವಿಕಲರ ಮಾಹಿತಿಯನ್ನು ಪಡೆದು ತದನಂತರ ಸದರಿಯವರು ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ನೀಡುವ ಕುರಿತಾಗಿರುತ್ತದೆ. ಕಾರ್ಯಕರ್ತರುಗಳಿಗೆ ಸರ್ಕಾರವು ಈಗಾಗಲೇ ಗೌರವಧನ ನಿಗಧಿಪಡಿಸಿ ಪಾವತಿಸುತ್ತಿರುತ್ತದೆ. ಸದರಿಯವರುಗಳು 'ಕಾರ್ಯಕರ್ತ' ರಾಗಿದ್ದು, 'ಗೌರವಧನ' ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವುದರಿಂದ ಕಾರ್ಯಕರ್ತರುಗಳು 'ಕಾರ್ಮಿಕ' ಪದದ ವ್ಯಾಖ್ಯಾನದಡಿ ಬರದಿರುವ ಕಾರಣ ಸದರಿಯವರಿಗೆ ಕನಿಷ್ಠ ವೇತನ ಕಾಯ್ದೆಯಡಿಯಲ್ಲಿನ ಯಾವುದೇ ಪ್ರಾವಧಾನಗಳು ಅನ್ವಯವಾಗುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ತಮ್ಮ ವಿಶ್ವಾಸಿ,

ಕಾರ್ಮಿಕ ಆಯುಕ್ತರ ಪರವಾಗಿ

5088
30.12.2014